## ಪ್ರತಿಭಾವಂತರು ಮುಂದೆ ಬರಲಿ

ಕನ್ನಡ ಝೀ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಸರಿಗಮಪ ಕಾರ್ಯಕ್ರಮದ 13 ನೇ ಸೀಸನ್‌ನಲ್ಲಿ ಭಾಗವಹಿಸಿದ್ದ ಸ್ಪರ್ಧಿ ಶಿವಮೊಗ್ಗ ಜಿಲ್ಲೆಯ ಸಾಗರದ ಸುಹಾನಾ ಸೈಯದ್ ಭಕ್ತಿಗೀತೆಗಳು ಮತ್ತು ಜಾನಪದ ಹಾಡುಗಳನ್ನು ತಮ್ಮ ಸುಶ್ರಾವ್ಯ ಕಂಠದಿಂದ ಅತ್ಯುತ್ತಮವಾಗಿ ಪ್ರಸ್ತುತ ಪಡಿಸಿದರು. ತೀರ್ಪುಗಾರರಾದ ವಿಜಯ್ ಪ್ರಕಾಶ್, ಅರ್ಜುನ್ ಜನ್ಯ ಮತ್ತು ರಾಜೇಶ ಕೃಷ್ಣನ್ ಸುಹಾನಾ ಅವರ ಕಂಠಸಿರಿಯಿಂದ ಹೊರಹೊಮ್ಮಿದ ಹಾಡುಗಳನ್ನು ಕೇಳಿ ಪ್ರಶಂಸೆ ವ್ಯಕ್ತಪಡಿಸಿದರು. ಸಂಗೀತ ಜಗತ್ತಿನಲ್ಲಿ ಜಾತಿ, ಧರ್ಮ, ಭಾಷೆಗಳ ಭೇದಗಳಿಲ್ಲ. ಹಲವಾರು ಪ್ರತಿಭಾನ್ವಿತರು ಕೆಲವು ಕಾರಣಗಳಿಂದ ಅವಕಾಶಗಳಿಂದ ವಂಚಿತರಾಗಿದ್ದಾರೆ. ಅಂಥವರು ಧೈರ್ಯದಿಂದ ಮುಂದೆ ಬಂದು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ವ್ಯಕ್ತಪಡಿಸಬಹುದು ಎಂಬುದಕ್ಕೆ ಇದೊಂದು ಉದಾಹರಣೆ.

- ಪಂಪಾಪತಿ ಹಿರೇಮಠ, ಧಾರವಾಡ,
ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

**ವಾರದ ಪತ್ರ**

## ಉಚ್ಚಾರಣೆ ಸ್ವಚ್ಛ ಇರಲಿ

ಇತ್ತೀಚೆಗೆ ಟಿವಿ ಚಾನೆಲ್ ಒಂದರಲ್ಲಿ ವಿಜಯ್ ಪ್ರಕಾಶ್ ಹಾಡಿದ ಓಂ ಶಿವೋಹಂ ಹಾಡಿನಲ್ಲಿ ಬರುವ ಸಿವೋಹಂ; ಅದೇ ರೀತಿ ಬೇರೆಯವರ ಹಾಡಿನಲ್ಲೂ ಶಿ ಬದಲಾಗಿ ಸಿ ಉಪಯೋಗ; ಹಲವು ಚಾನೆಲ್‌ಗಳಲ್ಲಿ ಕೆಲವು ನಿರೂಪಕರ ಬಾಯಲ್ಲಿ 'ಅ'ಕಾರವಾಗುವ ಹಕಾರಗಳು 'ಹ'ಕಾರವಾಗುವ ಅಕಾರಗಳು; ಮತ್ತೆ ಗುರುಗಳಾಗಲಿ, ಜ್ಯೋತಿಷಿಗಳಾಗಲಿ, ನಿರೂಪಕರಾಗಲಿ ಬಳಸುವ ದನದ ಹಾಲು ಎಂಬ ಮಾತು.. ಇಂತಹ ಹಲವಾರು ತಪ್ಪುಗಳು ಕಂಡುಬರುವುದು ಮಾಮೂಲಾಗಿದೆ. ದನದ ಹಾಲು ಎನ್ನುವುದು ತಪ್ಪು. ಆಕಳ ಹಾಲು ಅಥವಾ ಹಸುವಿನ ಹಾಲು ಎನ್ನುವುದು ಸರಿ.

—ಅಂಬಿಕಾ ಮಂಜುನಾಥಸ್ವಾಮಿ, ಭದ್ರಾವತಿ

## ಉಪಯುಕ್ತ ಸಂದೇಶದ 'ಶಾಂತಂ–ಪಾಪಂ'

ಪ್ರತಿ ಶನಿವಾರ ಹಾಗೂ ಭಾನುವಾರ ರಾತ್ರಿ 9ಕ್ಕೆ, 'ಕಲರ್ಸ್ ಸೂಪರ್' ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಕ್ರೈಂ ಲೋಕದ ಸರಣಿ 'ಶಾಂತಂ–ಪಾಪಂ'. ಇದರಲ್ಲಿ ವಿವಿಧ ಅಪರಾಧಗಳಲ್ಲಿ ತೊಡಗುವ ಅಪರಾಧಿಗಳನ್ನು ಪತ್ತೆ ಮಾಡಲು ಪೋಲಿಸರು ಅನುಸರಿಸುವ ಕಾರ್ಯ ವಿಧಾನ ತೋರಿಸುತ್ತಿದ್ದು ಇದು ಪ್ರಶಂಸನೀಯ. ಸರಣಿಯ ಕೊನೆಯಲ್ಲಿ ಜನತೆಗೆ ನೀಡುವ ಸಂದೇಶ ಸಮಾಜಕ್ಕೆ ಮಾರ್ಗದರ್ಶಿಯಾಗಿದೆ.

—ಸುಂದರ್, ಬೆಂಗಳೂರು

## ಸೂಪರ್ ಮಿನಿಟ್ ಖುಷಿ

ಕಲರ್ಸ್ ಕನ್ನಡ ವಾಹಿನಿಯಲ್ಲಿ ಶನಿವಾರ–ಭಾನುವಾರದಂದು ಪುನಃ ಪ್ರಾರಂಭವಾಗಿರುವ ಸೂಪರ್ ಮಿನಿಟ್ ಖುಷಿ ತಂದಿದೆ. ಮನೆ ಮಂದಿಯೆಲ್ಲಾ ಕುಳಿತು ವೀಕ್ಷಿಸುವಂತಹ ಆಟ ಇದಾಗಿದೆ. ಗಣೇಶರವರ ನಯ, ವಿನಯ, ಲಘು ಹಾಸ್ಯ ಮುದ ನೀಡುತ್ತದೆ. ಹಲವು ಆಟಗಳು ಚರ್ವಿತ, ಚರ್ವಣಗಳ ಮಧ್ಯೆ ಒಂದೆರಡು ಹೊಸ ಮಾದರಿ ಆಟಗಳು ನೋಡಲು ಲಭ್ಯವಾಗಿದೆ. ಹೊಸ ಸೆಟ್‌ನೊಂದಿಗಿನ ಈ ಕಾರ್ಯಕ್ರಮ ಧಾರಾವಾಹಿಗಳಿಗಿಂತ ಉತ್ತಮವೆನಿಸಿದೆ.

—ಮಧುರ ಸುಬ್ರಹ್ಮಣ್ಯ, ಬೆಂಗಳೂರು

## ಗೋಳಿನ ರಾಣಿ?

ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಅಂಜಲಿ ಧಾರಾವಾಹಿಯಲ್ಲಿ ಕನ್ನಡದ ಇನ್ನೊಂದು ವಾಹಿನಿ ಕಲರ್ಸ್ ಕನ್ನಡದಿಂದ ಬಂದಿರುವ ನಟಿಯೊಬ್ಬರಿಗೆ ಕೇವಲ ಅಳುವ ಪಾತ್ರಗಳೇ ಸಿಗುತ್ತವೆ ಎನಿಸುತ್ತದೆ. ಕಲರ್ಸ್ ಕನ್ನಡದ ಬದುಕು ಧಾರಾವಾಹಿಯ 8–10 ವರ್ಷದ ಹಾದಿಯಲ್ಲಿ ಅತ್ತು ಅತ್ತು ವೀಕ್ಷಕರ ಸಹನೆ ಕೆಡಿಸಿದ್ದ ಈ ನಟಿ ಈಗ ಝೀ ವಾಹಿನಿಯಲ್ಲಿ ಮತ್ತೆ ವೀಕ್ಷಕರ ಮುಂದೆ ಅಳುತ್ತಿದ್ದಾರೆ. ಅಂಜಲಿಯ ಎರಡನೆ ಕಂತಿನಲ್ಲಿ ಕಾಣಿಸಿಕೊಂಡಿರುವ ಈ ನಟಿ ಆರಂಭದಿಂದ ಇಲ್ಲಿಯವರೆಗೆ ಮಾಡಿದ್ದು ಬರಿ ಅಳು, ಅಳು.. ದಯವಿಟ್ಟು ವೀಕ್ಷಕರ ಮನ ಗೆಲ್ಲುವ ಬೇರೆ ಪಾತ್ರಗಳನ್ನು ಈ ನಟಿಗೆ ಕೊಡಿ ಎಂದು ನಿರ್ದೇಶಕರಿಗೆ ವಿನಂತಿಸಿಕೊಳ್ಳುತ್ತೇನೆ. ಇನ್ನು ಮುಂದೆ ಯಾವುದೇ ಧಾರಾವಾಹಿಯಲ್ಲಿ ಈ ರೀತಿಯ ಪಾತ್ರದಲ್ಲಿ ಕಾಣಿಸಿಕೊಳ್ಳದಿರಲೆಂದು ಆ ನಟಿಯಲ್ಲಿ ನನ್ನ ಕಳಕಳಿಯ ಮನವಿ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಅದ್ಭುತ 'ಹರಹರ ಮಹಾದೇವ'

ಇಡೀ ಮನೆಮಂದಿಯೆಲ್ಲಾ ಇಷ್ಟಪಟ್ಟು ನೋಡುವಂತಹ ಧಾರಾವಾಹಿ ಎಂದರೆ ಸ್ಟಾರ್ ಸುವರ್ಣದಲ್ಲಿ ರಾತ್ರಿ 7.30ರಿಂದ 8.00ರವರೆಗೆ ಪ್ರಸಾರವಾಗುವ ಹರಹರ ಮಹಾದೇವ. ಎಲ್ಲಾ ವಯಸ್ಸಿನವರು ಕೂತು ನೋಡುವತಂಹ ಧಾರಾವಾಹಿಯಾಗಿ ತುಂಬಾನೇ ಚೆನ್ನಾಗಿ ಮೂಡಿ ಬರುತ್ತಿದೆ. ಎಲ್ಲ ಧಾರಾವಾಹಿಗಳಿಗಿಂತ ವಿಭಿನ್ನವಾಗಿದೆ. ಮಹಾದೇವ, ಪಾರ್ವತಿ ಹಾಗೂ ಪ್ರತಿಯೊಂದು ಪಾತ್ರಗಳ ಅಭಿನಯ ಚೆನ್ನಾಗಿದೆ.

ಕಳೆದ ಒಂದೆರಡು ವಾರಗಳಿಂದ ವಿನಾಯಕನ ಆಗಮನದ ಎಪಿಸೋಡಿನಿಂದ ಕಣ್ಣನ ಸೆಳೆಯುವಂತಹ ದೃಶ್ಯಗಳು ಬರುತ್ತಿವೆ. ಮಹಾದೇವನು ವಿನಾಯಕನ ಶಿರಚ್ಛೇದನ ಮಾಡಿದ ಎಪಿಸೋಡಿನಲ್ಲಿ ಬಹಳ ಅದ್ಭುತವಾದ ಭಾವನಾತ್ಮಕ ದೃಶ್ಯ ತುಂಬಾ ಚೆನ್ನಾಗಿ ಮೂಡಿ ಬಂತು.

-ರಾಜೇಶ್ವರಿ ಬೆಳಾಲು

## ವಾದ್ಯ ವೃಂದದ ಪರಿಚಯ ಅಗತ್ಯ

ಝೀ ಕನ್ನಡ ವಾಹಿನಿಯಲ್ಲಿ ವೀಕ್ಷಕರಿಗೆ ಸಂಗೀತದ ಹಬ್ಬವೆಂದೇ ಪ್ರಚಲಿತವಾಗಿರುವ, ಸ್ಪರ್ಧಿಗಳಿಗೆ ತಮ್ಮ ಪ್ರತಿಭೆಯನ್ನು ಸಾಬೀತುಪಡಿಸುವ ವೇದಿಕೆ ಸಾ.ರೆ.ಗ.ಮ.ಪ. ಈ ಸ್ಪರ್ಧೆಯ ಯಶಸ್ಸಿಗೆ ಸ್ಪರ್ಧಿಗಳು ಹಾಗೂ ತೀರ್ಪುಗಾರರು ಎಷ್ಟು ಪ್ರಮುಖರೊ ಅಷ್ಟೇ ಮುಖ್ಯ ಪಾತ್ರವಹಿಸುವವರು ವಾದ್ಯ ತಂಡವೆಂದರೆ ಅತಿಶಯೋಕ್ತಿಯಲ್ಲ. ಕಾರ್ಯಕ್ರಮದ ಆರಂಭದ ದಿನದಂದು ನಿರೂಪಕಿ ಅನುಶ್ರೀಯವರು ವಾದ್ಯ ವೃಂದದ ಸದಸ್ಯರ ಪರಿಣಿತಿಯನ್ನು, ಅವರವರ ಅನುಭವವನ್ನು ಸಂಕ್ಷಿಪ್ತವಾಗಿ ವೀಕ್ಷಕರಿಗೆ ಪರಿಚಯಿಸಿದ್ದರೆ ಕಾರ್ಯಕ್ರಮಕ್ಕೆ ಇನ್ನೂ ಹೆಚ್ಚಿನ ಮೆರುಗು ಬರುತ್ತಿತ್ತು ನಿಸ್ಸಂಶಯ. ಮುಂದಿನ ದಿನಗಳಲ್ಲಾದರೂ ಈ ನಿಟ್ಟಿನಲ್ಲಿ ಪ್ರಯತ್ನಗಳಾಗಲಿ.

—ರಾಜೀವ್ ಎನ್. ಮಾಗಲ್, ಸಕಲೇಶಪುರ

## ಅಂಜಲಿ ಆದರ್ಶದ ಮಾದರಿ!

ಜಾಣರ ಪೆಟ್ಟಿಗೆಯಲ್ಲಿ ಗೋಕಾಕದ ರುಕ್ಮಿಣಿ ದೇಶಪಾಂಡೆ ಎಂಬುವವರು 'ಮಕ್ಕಳ ಹಾದಿ ತಪ್ಪಿಸಬೇಡಿ' ಎಂಬ ಶೀರ್ಷಿಕೆಯಡಿ ಹಲವು ಧಾರಾವಾಹಿಗಳಲ್ಲಿ ಮಕ್ಕಳ ಎಳೆ ಮನಸ್ಸಿನಲ್ಲಿ ದುರ್ಗುಣಗಳನ್ನು ತುಂಬಿಸಿದ್ದಾರೆ ಎಂದು ಆರೋಪಿಸಿದ್ದಾರೆ. ಅವರ ಕಳಕಳಿ ಬಗ್ಗೆ ನನಗೆ ನಿಜಕ್ಕೂ ಗೌರವವಿದೆ. ಆದರೆ ಆ ಪಟ್ಟಿಯಲ್ಲಿ ಅವರು ಝೀ–ವಾಹಿನಿಯಲ್ಲಿ ಸಂಜೆ 6ಕ್ಕೆ ಪ್ರಸಾರವಾಗುತ್ತಿರುವ ಅಂಜಲಿ ಧಾರಾವಾಹಿಯ ಹೆಸರನ್ನೂ ಸೇರಿಸಿದ್ದಾರೆ. ಆ ಧಾರಾವಾಹಿಯ ಚಿತ್ರಕತೆ ಹಾಗೂ ಸಂಭಾಷಣೆಯ ಜವಾಬ್ದಾರಿ ಹೊತ್ತಿರುವ ನಾನು ಇದಕ್ಕೆ ಸ್ಪಷ್ಟೀಕರಣ ನೀಡಲೇಬೇಕಿದೆ.

ಅಂಜಲಿ ಪಾತ್ರವನ್ನು ಒಂದು ಉದಾತ್ತ ಮುಗ್ಧ ಮಗುವಿನ ಪಾತ್ರವಾಗಿ ರೂಪಿಸಿದ್ದು ದ್ವೇಷ, ಅಸೂಯೆ, ಚಾಡಿ ಹೇಳುವುದೇ ಮೊದಲಾದ ಯಾವುದೇ ಒಂದೂ ದುರ್ಗುಣವನ್ನೂ ತುಂಬಿರುವುದಿಲ್ಲ. ನೂರು ಕಂತುಗಳನ್ನು ಮುಗಿಸಿರುವ ಈ ಧಾರಾವಾಹಿಯ ಒಂದೇ ಒಂದು ಘಟನೆಯಲ್ಲಿ ಅಂಜಲಿ ಪಾತ್ರದ ಮೂಲಕ ಇಂತಹ ವಿಕೃತಿಯನ್ನು ನಾವು ತೋರಿಸಿಲ್ಲ. ಅತ್ಯಂತ ಮಾನವೀಯ, ಆಪ್ತ ಪಾತ್ರವಾಗಿ ಹೊರಹೊಮ್ಮಿದೆ. ದಯಮಾಡಿ ಕೆಟ್ಟದ್ದನ್ನು ದೂರುವಂತೆ ಒಳ್ಳೆಯದನ್ನೂ ಗುರುತಿಸಿ ಒಂದು ಚಿಕ್ಕ ಮೆಚ್ಚುಗೆ ಕೊಡಿ.

—ತುರುವೇಕೆರೆ ಪ್ರಸಾದ್